 ISSN : 2583-2948

# ಸಂಪಾದಕೀಯ

"ಅನುಕರ್ಷ್" ತ್ರೈಮಾಸಿಕವು ಅಲಯನ್ಸ್ ವಿಶ್ವವಿದ್ಯಾಲಯದ ಭಾಷೆ ಹಾಗೂ ಸಾಹಿತ್ಯ ವಿಭಾಗದಿಂದ ಪ್ರಕಟಗೊಳ್ಳುತ್ತಿರುವ ತ್ರೈಮಾಸಿಕ ಪತ್ರಿಕೆಯಾಗಿದ್ದು, ಕಲೆ, ಸಾಹಿತ್ಯ, ಸಾಂಸ್ಕೃತಿಕ ಅಧ್ಯಯನ, ಸಮಾಜ ವಿಜ್ಞಾನ ಮೊದಲಾದ ಕ್ಷೇತ್ರಗಳಿಗೆ ಸಂಬಂಧಿಸಿದ ಸಂಶೋಧನಾ ಬರಹಗಳು, ಕಥೆ, ಕವಿತೆಗಳಿಗೆ ವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಅನುಕರ್ಷ್ ಪತ್ರಿಕೆಯು ತನ್ನ ಪ್ರಕಟಣೆಯ ದ್ವಿತೀಯ ವರ್ಷಕ್ಕೆ ಕಾಲಿಡುತ್ತಿದೆ. ಪ್ರಸ್ತುತ ಸಂಚಿಕೆಯು ಉದಾರ ಕಲಾ ಶಿಕ್ಷಣ: ತತ್ವ ಮತ್ತು ಪದ್ಧತಿ ಎಂಬ ವಿಷಯದ ಕುರಿತು ಕೇಂದ್ರೀಕೃತವಾಗಿದೆ.

ವ್ಯವಹಾರ ಅಧ್ಯಯನ ನಿಕಾಯ, ಕಾನೂನು ನಿಕಾಯ ಹಾಗೂ ಇಂಜಿನಿಯರಿಂಗ್ ನಿಕಾಯಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ ಬಂದಿರುವ ದಕ್ಷಿಣ ಭಾರತದ ಮೊದಲ ಖಾಸಗಿ ವಿಶ್ವವಿದ್ಯಾಲಯ ಎಂಬ ಹೆಗ್ಗಳಿಕೆಯನ್ನು ಹೊಂದಿರುವ ಅಲಯನ್ಸ್ ವಿಶ್ವವಿದ್ಯಾಲಯದ ಹೊಸ ಶೈಕ್ಷಣಿಕ ಘಟಕವಾಗಿ "ಉದಾರ ಕಲೆಗಳ ನಿಕಾಯ"ವು ಫೆಬ್ರವರಿ ೧೮,೨೦೨೨ರಂದು ಅಧಿಕೃತವಾಗಿ ಕಾರ್ಯಾರಂಭ ಮಾಡಿತು.

ಉದಾರ ಕಲಾ ಶಿಕ್ಷಣ ಪದ್ಧತಿಯು ಜ್ಞಾನ ಶಿಸ್ತುಗಳ ಮಧ್ಯದ ಅಂತರವನ್ನು ಕಡಿಮೆ ಮಾಡಿ ವ್ಯಕ್ತಿಯ ಒಟ್ಟಾರೆ ಜ್ಞಾನಕ್ಕೆ ಮಹತ್ವವನ್ನು ನೀಡುವ ಗುರಿಯನ್ನು ಹೊಂದಿದ್ದು, ಕಲೆ, ಸಾಹಿತ್ಯ, ಸಮಾಜ ವಿಜ್ಞಾನದ ಶಾಖೆಗಳು, ಸಾಂಸ್ಕೃತಿಕ ಅಧ್ಯಯನ, ಚಿತ್ರಕಲೆ, ದೃಶ್ಯ ಕಲೆ, ಪ್ರದರ್ಶಕ ಕಲೆಗಳನ್ನು ಒಳಗೊಂಡಂತೆ ಭೌತಿಕ ಹಾಗೂ ನೈಸರ್ಗಿಕ ವಿಜ್ಞಾನ ಶಾಖೆಗಳವರೆಗೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ.

ಪ್ರಸ್ತುತ ಸಂಚಿಕೆಯ ಕನ್ನಡ ಆವೃತ್ತಿಯು ಕಿನ್ನರಿ ಬೊಮ್ಮಯ್ಯನ ವಚನದ ಕುರಿತ ವಿವಿಧ ಆಯಾಮಗಳ ವಿಮರ್ಶೆಯನ್ನೊಳಗೊಂಡ ಲೇಖನ, ಸುರೇಶ ನಾಗಲಮಡಿಕೆಯವರ ಕೃತಿಗಳಲ್ಲಿ ಅವೈದಿಕ ಪರಂಪರೆಗಳು ನಿರೂಪಿತವಾಗಿರುವ ಬಗೆಯನ್ನು ವಿಶ್ಲೇಷಿಸಿರುವ ಬರಹ, ಕ್ವಾಂಟಂ ಜಗತ್ತಿನ ಕುರಿತು ಅಮೂಲ್ಯವಾದ ಸಂಗತಿಗಳನ್ನೊಳಗೊಂಡಿರುವ ಬರಹ, ಆನ್‌ಲೈನ್ ಶಿಕ್ಷಣದ ಮಹತ್ವವನ್ನು ಪ್ರತಿಬಿಂಬಿಸುವ ಲೇಖನ, ಲಿಯೋ ಟಾಲ್ ಸ್ಟಾಯ್ ನ ಅನ್ನ ಕರೆನಿನಾದ ಅವಲೋಕನವನ್ನೊಳಗೊಂಡ ವಿಮರ್ಶಾ ಬರಹ, ಮಾದಕ ದ್ರವ್ಯಗಳು ಹಾಗೂ ಮಾನವನ ಮೆದುಳಿನ ಕುರಿತ ಸಂಗತಿಗಳನ್ನೊಳಗೊಂಡ ವೈಜ್ಞಾನಿಕ ಲೇಖನ, ಇ- ಪುಸ್ತಕಗಳ ಮಹತ್ವವನ್ನು ಸಾರುವ ಲೇಖನ, ಮನುಷ್ಯನು ಆರೋಗ್ಯಯುತ ಜೀವನ ಸಾಗಿಸಲು ಅನುಸರಿಸಬೇಕಾದ ಸಂಗತಿಗಳನ್ನೊಳಗೊಂಡಿರುವ ಬರಹ, ಚಂದ್ರಶೇಖರ ಕಂಬಾರರ ಕರಿಮಾಯಿ ಕಾದಂಬರಿಯಲ್ಲಿ ನಿರೂಪಿತವಾಗಿರುವ ಸಂಪ್ರದಾಯ ಮತ್ತು ಆಧುನಿಕತೆಗಳನ್ನು ವಿಶ್ಲೇಷಿಸಿರುವ ಬರಹ, ಎಸ್.ಎಂ ಹಿರೇಮಠ ಅವರ ನಿಜ ಶರಣ ನಾಟಕದ ಅವಲೋಕನವನ್ನೊಳಗೊಂಡಿರುವ ಬರಹ ಸೇರಿದಂತೆ ಸಾಹಿತ್ಯ, ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿದ ವೈವಿಧ್ಯಮಯ ಬರಹಗಳಿಂದ ಪ್ರಸ್ತುತ ಸಂಚಿಕೆಯು ಕೂಡಿದೆ.

ಇಲ್ಲಿಯ ಲೇಖನಗಳನ್ನು ಸಹೃದಯಿ ಸಾಹಿತ್ಯ ಬಂಧುಗಳಾದ ತಾವು ಓದಿ ಪ್ರತಿಕ್ರಿಯಿಸುವಿರೆಂಬ ಅದಮ್ಯ ವಿಶ್ವಾಸ ನಮ್ಮದಾಗಿದೆ. ತಮ್ಮ ರಚನಾತ್ಮಕ ಸಲಹೆ- ಸೂಚನೆಗಳಿಗೆ ಸದಾ ಸ್ವಾಗತ.

ಧನ್ಯವಾದಗಳೊಂದಿಗೆ,

ಡಾ.ವಿವೇಕಾನಂದ ಸಜ್ಜನ